


ಅವನಿಗಿರುವ ಪ್ರೀತಿ ವಾಸ್ತವವಾಗಿಯೂ ಅದ್ಭುತವಾಗಿತ್ತು. ತಾನು ಒಮ್ಮೆ ಓದಿದ ಪುಸ್ತಕದ ಹೆಸರು, ಅದರ ಲೇಖಕರು ಮತ್ತು ಅದರ ವಸ್ತುವನ್ನು ಅವನೆಂದೂ ಮರೆಯುತ್ತಿರಲಿಲ್ಲ. ಆದರೂ ಈಗ, ಅಹಮದಾಬಾದ್ ಏರ್‌ಪೋರ್ಟಿನ ಮಾರ್ಗದಿಂದ ಅನೇಕ ಬಾರಿ ಹಾದು ಹೋಗಿದ್ದಾಗ್ಯೂ ಅವನಿಗೆ ರಸ್ತೆಯ ಬಗ್ಗೆ ಏನೂ ಸಹ ನೆನಪಿಲ್ಲ.

ಇದು ಹಾಗಲ್ಲ, ಅಂದರೆ ತಾನು ಇಷ್ಟು ವೃದ್ಧನಾಗಿಲ್ಲ, ತನ್ನ ನೆನಪಿನ ಶಕ್ತಿ ಸಹ ಇಷ್ಟು ಕಡಿಮೆಯಾಗಿಲ್ಲ ಎಂದು ತನಗೆ ತಾನೇ ಸಮಾಧಾನ ಮಾಡಿಕೊಳ್ಳಲು ಪ್ರಯತ್ನಿಸಿದ. ತಾನೆಂದೂ ಸಹ ಮಾರ್ಗದ ಬಗ್ಗೆ ಗಮನವನ್ನೇ ಕೊಟ್ಟಿರದ ಸಾಧ್ಯತೆಯೂ ಇದೆ; ಅಥವಾ ತಾನು ಅಹಮದಾಬಾದ್ ಸ್ಟೇಷನ್ನಿನಿಂದ ಏರ್‌ಪೋರ್ಟ್ ಕಡೆಗೆ ಹೋಗುವಾಗ ಇಷ್ಟು ಬೆಳಕಿರದ ಸಾಧ್ಯತೆಯೂ ಇದೆ.

ಬೆಳಕಿನ ನೆನಪಾಗುತ್ತಲೇ ಅವನು ಆಟೊದಿಂದ ಹೊರಗೆ ನೋಡಿದ, ಆಗ ಅಲ್ಪ ಪ್ರಮಾಣದ ಬೆಳಕು ಸೂಸುತ್ತಿತ್ತು. ಅವನು ಆಟೊ ರಿಕ್ಷಾ ಚಾಲಕನ ಸಮೀಪದಲ್ಲಿದ್ದ ಕನ್ನಡಿಯಲ್ಲಿ ನೋಡಿದ; ಆ ಕನ್ನಡಿಯಲ್ಲಿ ಚಾಲಕನ ಮುಖ ಕಾಣ ಬರುತ್ತಿತ್ತು. ಸ್ಟೇಷನ್ನಿನಿಂದ ಆಟೊ ರಿಕ್ಷಾದಲ್ಲಿ ಹತ್ತುವಾಗ ಅವನು ಚಾಲಕನ ಮುಖವನ್ನು ಗಮನವಿಟ್ಟು ನೋಡಿರಲಿಲ್ಲ. ಸಾಮಾನ್ಯವಾಗಿ ಅವನು ದಿಲ್ಲಿಗೆ ಹೋಗಲು ಗಾಂಧಿ ಧಾಮ್ ಇಂಟರ್‌ಸಿಟಿ ಟ್ರೈನಿನಲ್ಲಿಯೇ ಬರುತ್ತಾನೆ. ಇಂಟರ್‌ಸಿಟಿ ಐದು ಗಂಟೆಗೆ ಅಹಮದಾಬಾದ್ ಸ್ಟೇಷನ್ನಿಗೆ ಬರುತ್ತದೆ. ಅವನು ತನ್ನೊಂದಿಗೆ ಕಡಿಮೆ ಲಗೇಜನ್ನು ತೆಗೆದುಕೊಳ್ಳುತ್ತಾನೆ. ಹೀಗಾಗಿ ಖುದ್ದು ಲಗೇಜುಗಳೊಂದಿಗೆ ಇಳಿದು ಮೊದಲು ಪ್ಲಾಟ್‌ಫಾರ್ಮ್‌ನಲ್ಲಿ ಚಹಾವನ್ನು ಕುಡಿಯುತ್ತಾನೆ, ನಂತರ ಪ್ರಥಮ ದರ್ಜೆಯ